◆ **ನಿಮ್ಮ ಬಹುಪಾಲು ಕವಿತೆಗಳು 'ಕವಿತೆ', ಅದರ ಪ್ರಕ್ರಿಯೆ ಕುರಿತು ಮಾತನಾಡುತ್ತವೆ. ನಿಮ್ಮ ಒಂದು ಇಡೀ ಸಂಕಲನವು ಕವಿ, ಕವಿತೆ, ಭಾಷೆ, ಅನುವಾದ ಇತ್ಯಾದಿ ಬಗ್ಗೆಯೇ ಇದೆ. ನಿಮ್ಮದೇ ಆದ ಕಾವ್ಯಮೀಮಾಂಸೆಯೊಂದು ಇವೆಲ್ಲವುಗಳ ಮೂಲಕ ರೂಪು ತಳೆದಿದೆ. ಕವಿತೆಯು ಮೈತಳೆಯುವುದು ಭಾಷೆಯಲ್ಲಿ, ಕವಿಯು ಬಳಸುವ ಪದಗಳು ಹಾಗೂ ಅವು ಬೀರುವ ಪರಿಣಾಮಗಳಲ್ಲಿ ಎಂಬುದರ ಅರಿವು ಇರುವ ಕವಿ ಮಾತ್ರ 'ಕವಿತೆ' ಕುರಿತು ಬರೆಯಬಲ್ಲ/ಳು ಅನ್ನುವುದು ನನ್ನ ನಂಬಿಕೆ...**

ಹೌದು. ಭಾಷೆ, ಕಾವ್ಯ ಮತ್ತು ಕವಿಗಳನ್ನು ಕುರಿತ ನನ್ನ ಕವಿತೆಗಳಲ್ಲಿ ಈ ಸಂಗತಿಯನ್ನು ಹಲವು ವಿಧದಲ್ಲಿ ಸೂಚಿಸಲು ನಾನು ಯತ್ನಿಸಿದ್ದೇನೆ. 'ಪದ'ವು ಕವಿತೆಯ ಅತಿ ಚಿಕ್ಕ ಘಟಕ, ಇದರ ನಂತರ 'ಸಾಲು' (ಪಂಕ್ತಿ) ಬರುತ್ತದೆ. ಪದಗಳಿಗೆ ನೆನಪುಗಳಿರುತ್ತವೆ, ಹಲವು ಸಂಗತಿಗಳ ಜೊತೆಗಾರಿಕೆಯಿರುತ್ತದೆ, ಅರ್ಥಗಳು, ಸಂದರ್ಭಗಳಿರುತ್ತವೆ, ಮತ್ತು ಇದು ನಮ್ಮೆಲ್ಲ ಇಂದ್ರಿಯಗಳಿಗೆ ರುಚಿಸುತ್ತದೆ. 'ಪದ' ಎನ್ನುವಂತಹದ್ದು ತನ್ನದೇ ಆದ ಪುಟ್ಟ ಲೋಕ. ಆದರೆ ಕವಿತೆಯಲ್ಲಿ ಅಂತಿಮವಾಗಿ ಮುಖ್ಯವಾಗುವಂತದ್ದು ಪದಗಳು, ವಾಕ್ಯಗಳು, ರೂಪಕಗಳು, ಪ್ರತಿಮೆಗಳು ಮತ್ತು ಇಡಿಯಾದ ಆಕೃತಿಯು ಉಂಟು ಮಾಡುವ ಒಟ್ಟಾರೆಯ ಪರಿಣಾಮ; ಬೇರೆ ಮಾತುಗಳಲ್ಲಿ ಹೇಳುವುದಾದರೆ, ಯಥಾವತ್ತು ಸಾಲುಗಳು ಮರೆತುಹೋದರೂ ನಮ್ಮೊಳಗೆ ಉಳಿಯುವ ಎಂತದ್ದೋ ಭಾವ. ಇದನ್ನೇ ನಮ್ಮ ಪುರಾತನ ಕಾವ್ಯಮೀಮಾಂಸೆಯು 'ಧ್ವನಿ' ಎನ್ನುವುದು: ಅದು ಕೇವಲ ಪದವೊಂದರಿಂದ ಉಂಟಾದ ಭಾವಸಾಹಚರ್ಯ ಮಾತ್ರವಲ್ಲ, ಬದಲಿಗೆ ಒಂದು ಕವಿತೆಯನ್ನು ಅಡ್ಡಡ್ಡ ಮತ್ತು ಉದ್ದುದ್ದವಾಗಿ ಓದಿದ ನಂತರ ಉಳಿಯುವ ಇಡಿಯಾದ ಪರಿಣಾಮ.

◆ **... ಈ ಚರ್ಚೆಯನ್ನು ಮುಂದುವರೆಸಿ ಕೇಳುವುದಾದರೆ, 'ಕ್ಯಾಕ್ಟಸ್' ಎನ್ನುವ ಕವಿತೆಯಲ್ಲಿ ನೀವು 'ಚೂಪಾದ, ಚುಚ್ಚುವ... ಸಮಾನಾಂತರ ಭಾಷೆ'ಯ ಬಗ್ಗೆ ಹೇಳುತ್ತೀರಿ. ಒಬ್ಬ ಕವಿ/ ಸಾಮಾಜಿಕ ಹೋರಾಟಗಾರ/'ಸಾರ್ವಜನಿಕ ಬುದ್ಧಿಜೀವಿ'ಗೆ ಈ 'ಸಮಾನಾಂತರ ಭಾಷೆ' ಬೇಕೆ? ಅದು ಎಷ್ಟು ಮುಖ್ಯ? ಯಾಕೆ?**

ಆ ಕವಿತೆಯಲ್ಲಿ, ಪಾಪಾಸುಕಳ್ಳಿ ಗಿಡವು ತನ್ನ ಭಾಷೆಯನ್ನು ಕುರಿತು ಮಾತನಾಡುತ್ತಿದೆ. ಅದು ನಿಜವಾದರೂ, ಸಾಮಾಜಿಕ ಸಂಕಷ್ಟಗಳನ್ನು ತೋಡಿಕೊಳ್ಳಲು ಮತ್ತು ಅಧಿಕಾರಕ್ಕೆ ಪ್ರತಿರೋಧವನ್ನು ಸೂಚಿಸಲು, ಶಕ್ತಿಯುತವಾದ ಹಾಗೂ ಅನನ್ಯವಾದ ನುಡಿಗಟ್ಟಿನ ಅವಶ್ಯಕತೆಯನ್ನೂ ಅದು ಧ್ವನಿಸುತ್ತದೆ. ಪ್ರಜಾಪ್ರಭುತ್ವವು ಬೇಗಬೇಗ ನಾಶಗೊಳ್ಳುತ್ತಿರುವ, ಸಂವಿಧಾನವೂ ನಿರ್ಲಕ್ಷಿತವಾಗುತ್ತಿರುವ ಮತ್ತು ಹೊಸ ಬಗೆಯ ಸರ್ವಾಧಿಕಾರವೊಂದು–ಬಂಡವಾಳಶಾಹಿಗಳು ಬೆಂಬಲಿಸುವ 'ದೈವಪ್ರಭುತ್ವ'ದ ರಾಜ್ಯ– ತಲೆ ಎತ್ತುತ್ತಿರುವ ಈ ನಮ್ಮ ಕಾಲದಲ್ಲಿ ಇಂತಹ ಭಾಷೆಯ ಅಗತ್ಯ ಹಿಂದೆಂದಿಗಿಂತ ಹೆಚ್ಚಿದೆ. ನಾವು ಸ್ಪಷ್ಟವಾಗಿ, ಜೋರಾಗಿ ಮತ್ತು ಜೋಪಾನವಾಗಿ ಸತ್ಯವನ್ನು ಮಾತನಾಡಬೇಕಿದೆ.

◆ **ನನಗನ್ನಿಸುವಂತೆ ಪ್ರತಿಯೊಬ್ಬ ವ್ಯಕ್ತಿಗೂ ಇರಬೇಕಾದ ಸ್ವತಂತ್ರವಾದ ಬೌದ್ಧಿಕಚಿಂತನೆಯ ಅವಕಾಶವು ದಿನೇದಿನೇ ಕುಗ್ಗುತ್ತಿದೆ, ನಿಯಂತ್ರಿತವಾಗುತ್ತಿದೆ ಎನ್ನುವುದನ್ನು ನೀವು ಒಪ್ಪುವಿರಾ?**

ಭಾರತದಲ್ಲಿ ಸ್ವತಂತ್ರ ಚಿಂತನೆ ಮತ್ತು ಪ್ರತಿರೋಧದ ಅವಕಾಶವು ಖಂಡಿತವಾಗಿ ಕುಗ್ಗುತ್ತಿದೆ. ಇತ್ತೀಚಿನ ದಶಕಗಳಲ್ಲಿ ಬಹುಶಃ ವಿಶ್ವದೆಲ್ಲೆಡೆ ಹೀಗೇ ಆಗುತ್ತಿದೆ...

◆ **...ಇದಕ್ಕೆ ಕಾರಣಗಳೇನಿರಬಹುದು?**

ಇದಕ್ಕೆ ಕಾರಣ ಹುಡುಕುವುದು ಕಷ್ಟವೇನಲ್ಲ: ಧರ್ಮ, ಲಿಂಗ, ವರ್ಗ ಮತ್ತು ಜಾತಿಯ ಹೆಸರಿನಲ್ಲಿ ಹೆಚ್ಚುತ್ತಿರುವ ಅಸಹನೆ; ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ಮಾಧ್ಯಮಗಳು; ಹಲವು ಬಗೆಯ ಧರ್ಮಾಂಧತೆ; ಒಂದು ಬಗೆಯ ತಾಮಸವೂ, ಕ್ರೂರಿಯೂ ಆದ ಮಧ್ಯಕಾಲೀನಯುಗದ ಮನೋಧರ್ಮಕ್ಕೆ ವಾಪಸಾಗುವಿಕೆ; ನಿಜವಾದ ಆಧ್ಯಾತ್ಮಿಕತೆಯ ಜಾಗದಲ್ಲಿ ಒರಟಾದ, ಅಧಿಕಾರದಾಹಿಯಾದ ಕೋಮುವಾದದ ಪ್ರತಿಷ್ಠಾಪನೆ, ಇತ್ಯಾದಿ. ಆದರೂ, ಪ್ರತಿಯೊಬ್ಬರೂ